ii) ರಾಜ್ಯದಲ್ಲಿ ಶಾಲೆಗಳು ಮೊದಲಿನಂತೆ ಶನಿವಾರ ಬೆಳಿಗ್ಗೆ ಮಾತ್ರ ನಡೆಸುವಂತೆ ಆದೇಶಿಸಂವುದು.

ಅಧ್ಯಕ್ಷರು.—ಶ್ರೀ ವಸಂತ ವಿ. ಸಾಲಿಯಾನರವರು.

ಶ್ರೀ ವಸಂತ ವಿ. ಸಾಲಿಯಾನ.—ಮಾನ್ಯ ಅಧ್ಯಕ್ಷರೇ, ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದ ಶನಿವಾರ ಬೆಳಿಗ್ಗೆ ಮಾತ್ರ ಶಾಲೆ ಇದ್ದದ್ದನ್ನು ರದ್ದು ಮಾಡಿ ಪೂರ್ತಿ ದಿನ ಶಾಲೆ ನಡೆಯುವಂತೆ ಮತ್ತು ಎಲ್ಲಾ ಸರಕಾರಿ ಕಛೇರಿಗಳಂತೆ ಶಾಲೆಗೂ ತಿಂಗಳ ಎರಡನೇ ಶನಿವಾರವನ್ನು ರಜಾ ದಿನವೆಂದು ಸರಕಾರ ಆದೇಶ ನೀಡಿದೆ. ಧಾರ್ಮಿಕ ದೃಷ್ಟಿಯಲ್ಲಿ ಇದು ಸರಿಯಲ್ಲ. ವಾರವಿಡೀ ದುಡಿದ ಮಣ್ಣಿನ ಮಕ್ಕಳಾದ ರೈತರಿಗಂತೂ ವಿಶ್ರಾಂತಿ ಹಾಗೂ ಶುಚಿಯ ದೃಷ್ಟಿಯಿಂದ ಬಹು ಮುಖ್ಯವಾದುದು. ದೊಡ್ಡವರ ಆಚರಣೆಯಲ್ಲಿ ಭಾಗಿಗಳಾಗಿರುವ ವಿದ್ಯಾರ್ಥಿಗಳಿಗೆ ಧಾರ್ಮಿಕ ಕಲ್ಪನೆ ಬೆಳೆಯುತ್ತದೆ. ಇದು ಶಾಲೆಗಳಲ್ಲಿ ದೊರೆಯುವುದಕ್ಕಿಂತಲೂ ನೈಜವಾದ ಶಿಕ್ಷಣವಾಗುತ್ತದೆ. ಈ ವಿಚಾರವನ್ನು ಸರಕಾರವು ಕೂಡಲೇ ಪರಿಶೀಲಿಸಿ ಮೊದಲಿನಂತೆ ಇದ್ದ ಪದ್ಧತಿಯಂತೆ ಶಾಲೆ ನಡೆಯುವಂತೆ, ಅಂದರೆ, ಶನಿವಾರ ಬೆಳಿಗ್ಗೆ ಮಾತ್ರ ಇದನ್ನು ಜಾರಿಗೊಳಿಸಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಸದಸ್ಯರ ಸಲಹೆಯನ್ನು ಸರ್ಕಾರ ಪರಿಶೀಲಿಸುತ್ತದೆ.

ಳ) ಗ್ರಾಹಕ ರಕ್ಷಣಾ ಮಸೂದೆಗಾಗಿ ಒತ್ತಾಯ

ಶ್ರೀ ಜಿ.ಎಸ್. ಆಚಾರ್.—ದೇಶದಾದ್ಯಂತ ವಿವಿಧ ಸರಕುಗಳಿಂದ ಅಸಂಖ್ಯಾತ ಗ್ರಾಹಕರಿಗೆ ಪ್ರತಿನಿತ್ಯವೂ ಭಾರಿ ಅನ್ಯಾಯವಾಗುತ್ತಿದೆ. ಇದರ ಪ್ರಜ್ಞೆಯೇ ಇರದ, ಮಂಕಾ, ತಟಸ್ಥ, ನಿಷ್ಕ್ರಿಯ ಗ್ರಾಹಕರಿಂ ಕೋಟ್ಯಾಂತರ ಮಂದಿ, ಅರಿವಿರುವ ಕೆಲವೇ ಜನ ಎಂ.ಆರ್ ಟಿ.ಟಿ. ಆಯೋಗಕ್ಕೆ ದೂರಂ ಸಲ್ಲಿಸಿ, ನ್ಯಾಯ ದೊರಕಿಸಿಕೊಂಡಿದ್ದಾರೆ. ಕೋಟಿಗಟ್ಟಲೆ ಗ್ರಾಹಕರ ಎಲ್ಲಾ ದೂರುಗಳನ್ನು ಪರಿಶೀಲಿಸಲು ಆ ಆಯೋಗಕ್ಕೆ ಅಸಾಧ್ಯ. ಗ್ರಾಹಕರಿಗೆ ಸರ್ವರಕ್ಷಣೆ ಒದಗಿಸಲು ಕೇಂದ್ರ ಸರಕಾರ, ಗ್ರಾಹಕರ ರಕ್ಷಣಾ ಮಸೂದೆ ೧೯೮೬ನ್ನು ರೂಪಿಸಿದೆ. ಈ ಶಾಸನದನ್ವಯ ರಾಜ್ಯಮಟ್ಟದಲ್ಲಿ ಈ ಮಸೂದೆಯ ಅಂಗೀಕಾರ, ಮಸೂದೆ ಜಾರಿಗೆ ನಿಯಮಗಳ ರಚನೆ, ರಾಜ್ಯಮಟ್ಟದ ಗ್ರಾಹಕರ ರಕ್ಷಣಾ ಸಮಿತಿಯ ರಚನೆ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಪರಿಹಾರ ವೇದಿಕೆಗಳ ನಿರ್ಮಾಣ ಆಗಬೇಕಾಗಿದೆ. ೧೯೮೭ರ ಜುಲೈಯಲ್ಲಿ ನವದೆಹಲಿಯಲ್ಲಿ ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆಗಳ ಸಚಿವರ ಸಭೆಯಲ್ಲಿ ಎಲ್ಲಾ ರಾಜ್ಯಗಳಲ್ಲೂ ಬೇಗನೆ ಗ್ರಾಹಕ ರಕ್ಷಣ ಮಸೂದೆ ಜಾರಿಗೊಳಿಸಲು ತೀರ್ಮಾನಿಸಲಾಗಿತ್ತು. ಕರ್ನಾಟಕದಲ್ಲಿ ಖಂಡಿತ ಜಾರಿಯಾಗುವುದೆಂದು ರಾಜ್ಯ ಆಹಾರ ನಾಗರಿಕ ಪೂರೈಕೆ ಸಚಿವರು ವಾಗ್ದಾನವಿತ್ತು ಆರೇಳು ತಿಂಗಳುಗಳೇ ಉರುಳಿವೆ. ಇನ್ನೂ ಜಾರಿ ಆಗಿಲ್ಲ. ಇದರ ಬಗ್ಗೆ ಚಿಂತನೆಯೇ ಇಲ್ಲ. ಬರೇ ಭಿನ್ನ ಮತದ ಕುರಿತು ಚಿಂತನೆ ಮಾಡುವ ಬದಲು ಯಾವುದೇ ಭಿನ್ನ ಮತವಿರದ ಈ ಕೋಟ್ಯಾಂತರ ಗ್ರಾಹಕರ ಹಿತದ ಕುರಿತು ಚಿಂತನೆ ಮಾಡುವುದು ತೀರಾ ಅವಶ್ಯ. ಈ ಮಸೂದೆಯನ್ನು ಜಾರಿಗೆ ತರಲು ತಗಲುವ ವೆಚ್ಚವನ್ನೂ ಸಹ ಕೇಂದ್ರ ಸರಕಾರದ 'ಯೋಜನಾ ವೆಚ್ಚ' ದಿಂದ ನೀಡಲಾಗುವುದು. ಎಂದು ತಿಳಿದು ಬಂದಿದೆ. ಈ ಶಾಸನ ಜಾರಿಗೆ ಬಂದಾಗ ಅನ್ಯಾಯಕ್ಕೊಳಗಾದ ಗ್ರಾಹಕನಿಗೆ ನ್ಯಾಯ ಪಡೆಯಲು ಕಾನೂನಿನ ಬೆಂಬಲ ದೊರಕುತ್ತದೆ. ಖರೀದಿಸಿದ ಸಾಮಗ್ರಿ. ದೋಷಪೂರಿತವಾಗಿದ್ದಲ್ಲಿ, ಬದಲಿಯಾಗಿ ಉತ್ತಮಗುಣ ಮಟ್ಟದ ಸಾಮಗ್ರಿ ದೊರಕುತ್ತದೆ ಅಥವಾ ಕೆಲ ಬೆಲೆ ಮರಳಿ ದೊರಕುತ್ತದೆ. ನಷ್ಟಪರಿಹಾರವೂ ದೊರಕುತ್ತದೆ. ಪ್ರತಿನಿತ್ಯ ಗ್ರಾಹಕರ ಮೇಲೆ ಆಗುತ್ತಿರುವ ಲೆಕ್ಕವಿಲ್ಲದಷ್ಟು ಮೋಸದ ಪ್ರಕರಣಗಳು ನಿಲ್ಲಬೇಕು. ಗ್ರಾಹಕರಿಗೆ ನ್ಯಾಯ ರಕ್ಷಣೆ ದೊರೆಯಬೇಕು. ಆದಕ್ಕಾಗಿ ಗ್ರಾಹಕರ ರಕ್ಷಣ ಮಸೂದೆ ಜಾರಿಗೊಳಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಗ್ರಾಹಕರ ರಕ್ಷಣಾ ಮಸೂದೆ ೧೯೮೬ನ್ನು ಅನುಷ್ಠಾನಗೊಳಿಸಲು ೧೯೮೮-೮೯ನೇ ಸಾಲಿನ ಆಯವ್ಯಯದಲ್ಲಿ ೬೫ ಲಕ್ಷ ರೂಪಾಯಿಗಳನ್ನು ಸೂಚಿಸಲಾಗಿದೆ. ಗ್ರಾಹಕರ ರಕ್ಷಣಾ ಮಸೂದೆಯ ನಿಯಮಗಳನ್ನು ಪ್ರಕಟಿಸಲು ಕರಡನ್ನು ಸಿದ್ಧಪಡಿಸಲಾಗಿದೆ. ಗ್ರಾಹಕರ ರಕ್ಷಣಾ ಮಸೂದೆಯ ಕೆಳಗೆ ಗ್ರಾಹಕರ ಸಂರಕ್ಷಣಾ ಸಮಿತಿಯನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.